# ಮಣಿಪುರಿ ಪೋಲೋ



ಚಿತ್ರ ಬರಹ:
**ದಿಲೀಪ್ ಬ್ಯಾನರ್ಜಿ**

ಪೋಲೋ ಆಟ ಅಂತರರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಗಳಿಸಿದೆ. ಮಣಿಪುರಿ ಪೋಲೋ ಪುರಾತನ ಕ್ರೀಡೆಗಳಲ್ಲಿ ಒಂದು. ಇತಿಹಾಸ ಹೇಳುವಂತೆ ಪೋಲೋ ಆಟ ಹುಟ್ಟಿದ್ದು ಪುರಾತನ ಪರ್ಷಿಯಾದಲ್ಲಿ. ನಂತರದ ಕಾಲಘಟ್ಟದಲ್ಲಿ ಪ್ರಪಂಚದ ಇತರೆಡೆ ಹರಡಿತು. ಭಾರತಕ್ಕೆ ಮೊಗಲರು ಪೋಲೋವನ್ನು ಪರಿಚಯಿಸಿದರು.

ಮಣಿಪುರಿಗಳಿಗೆ ಈ ಆಟದ ಮೇಲೆ ವಿಶಿಷ್ಟ ಮೋಹ, ಏಕೆಂದರೆ ಇದು ಅವರ ಪುರಾತನ ಆಟವೂ ಹೌದು. ಪೋಲೋಗೆ ಸೂಕ್ತ ರೂಪುರೇಷೆ ಕೊಟ್ಟು ಮುಖ್ಯವಾಹಿನಿಗೆ ತರುವಲ್ಲಿ ಮಣಿಪುರಿ ಜನರ ಕೊಡುಗೆ ತುಂಬ ದೊಡ್ಡದು.

ಮಣಿಪುರಿ ಭಾಷೆಯಲ್ಲಿ ಇದನ್ನು ಸಂಗೋಲ್ ಕಾಂಜಿ ಎಂದು ಕರೆಯುತ್ತಾರೆ. ಅಂದರೆ, ಕುದುರೆ ಮೇಲೆ ಸವಾರಿ ಮಾಡುತ್ತ, ಹಾಕಿ ಆಟ ಆಡುವುದು ಎಂದರ್ಥ. ಮಣಿಪುರಿ ಪೋಲೋ ಆಟದಲ್ಲಿ ಏಳು ಮಂದಿ ಆಟಗಾರರು ಕುದುರೆ ಏರಿರುತ್ತಾರೆ. ಇಲ್ಲಿ ಏಳು ಎನ್ನುವುದು ಮಣಿಪುರಿಗಳಿಗೆ ಪವಿತ್ರ ಸಂಖ್ಯೆಯೂ ಹೌದು. ಏಳು ಸಂತತಿ (ವಂಶ)ಗಳ ಸೂಚಕ. ತಂಡದ ಏಳು ಆಟಗಾರರಿಗೂ ಅವರದೇ ಆದ ಸ್ಥಾನವಿರುತ್ತದೆ.

ಪ್ರತೀ ಆಟಗಾರನ ಕೈಯಲ್ಲಿ ಒಂದೊಂದು ಪೋಲೋ ಸ್ಟಿಕ್ ಇರುತ್ತದೆ. ಚೆಂಡನ್ನು ಹೊಡೆಯಲು ಸುಲಭವಾಗುವಂತೆ ಮರದ ತುಂಡು ಸೇರಿಸಿರುತ್ತಾರೆ. ಆಟದ ವೈಖರಿ ಪ್ರೇಕ್ಷಕರು ಉಸಿರುಗಟ್ಟಿ ನೋಡುವಷ್ಟು ರೋಚಕವಾಗಿರುತ್ತದೆ.

ಇಲ್ಲಿ ಪೋಲೋ ಎರಡು ಬಗೆಯಲ್ಲಿ ಆಡುತ್ತಾರೆ. ಒಂದು ಮಣಿಪುರಿ ಪೋಲೋ ಮತ್ತೊಂದು ಅಂತರಾಷ್ಟ್ರೀಯ ಪೋಲೋ. ಮಣಿಪುರಿ ಪೋಲೋದಲ್ಲಿ ಕುದುರೆಗಳಿಗೆ ತೊಂದರೆ ಆಗದಿರಲೆಂದು ವಿಶೇಷ ಎಚ್ಚರಿಕೆ ವಹಿಸಲಾಗುತ್ತದೆ.

ಮಣಿಪುರಿ ಪೋಲೋ ಆಟದಲ್ಲಿ ಇಂತಿಷ್ಟು ಕಾಲಾವಧಿ ಎಂದು ನಿಗದಿ ಇಲ್ಲ. ಅದು ಆ ದಿನದ ಆಟದ ಮೇಲೆ ಅವಲಂಬಿತವಾಗಿರುತ್ತದೆ. ಎದುರಾಳಿ ತಂಡ ಆ ದಿನ ಗುರಿ ತಲುಪದಿದ್ದಲ್ಲಿ, ಮುಂದಿನ ದಿನಕ್ಕೆ ಆಟವನ್ನು ಮುಂದೂಡಲಾಗುತ್ತದೆ.

ಸಾಂಪ್ರದಾಯಿಕ ಪೋಲೋ ಆಟದಲ್ಲಿ ರೆಫರಿ ಚಂಡನ್ನು ಎತ್ತರಕ್ಕೆ ಎಸೆಯುವ ಮೂಲಕ ಆಟ ಆರಂಭಿಸುತ್ತಾನೆ. ಆ ಚಂಡು ಮೇಲಿಂದ ಕೆಳಗೆ ಬೀಳುವ ಸಮಯದಲ್ಲಿ ತಡೆದು, ಗೋಲ್ ಬಾರಿಸುವ ಅವಕಾಶ ಇದೆ. 1928 ರಲ್ಲಿ ಚುರಾಚಂಡ್ ಸಿಂಗ್ ಎಂಬವರು ಕೆಲವು ನಿಯಮಗಳನ್ನು ರೂಪಿಸಿದರು.

ಮಣಿಪುರಿಗಳಿಗೆ ಏಳು ಆಟಗಾರರಲ್ಲಿ ಪ್ರತಿಯೊಬ್ಬನೂ ತಮ್ಮ ಆರಾಧ್ಯ ದೈವವನ್ನು ಪ್ರತಿನಿಧಿಸುತ್ತಿರುತ್ತಾನೆ. ಸಾಂಪ್ರದಾಯಿಕ ಮಣಿಪುರಿ ಆಟ ದೇವರುಗಳ ನಡುವಿನ ಆಟವಿದ್ದಂತೆ. ಪ್ರತೀ ತಂಡದ ಆಟಗಾರರು ತಮ್ಮ ದೇವರಿಗೆ ಗೆಲುವು ತಂಡುಕೊಡುವಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಾರೆ.

